ಅನುಭವವಿತ್ತು. ಬಹಳ ಕಾಲದ ಹಿಂದೆ ಅವರ ಅಜ್ಜನ ಒಂದು ಗುಡಿಸಲು ಚಾ ಅಂಗಡಿ ಇತ್ತಂತೆ. ವಿರುಪಾಕ್ಷಪ್ಪ ಆವಾಗ ಇನ್ನೂ ಹುಟ್ಟಿರಲಿಲ್ಲ. ಅಪ್ಪ ಸಣ್ಣವನಿದ್ದಾಗ ಕುದಿಯುತ್ತಿರುವ ನೀರಿಗೆ ಚಹಾಪುಡಿ ಹಾಕುತ್ತಿದ್ದನೆಂದು, ಒಂದು ಸಲ ಸುಡುವ ಚಹಾ ಕೈಮೇಲೆ ಬಿದ್ದು ಕೈಸುಟ್ಟ ಗುರುತು ಕೊನೆಯವರೆಗೂ ಇತ್ತೆಂದೂ ವಿರುಪಾಕ್ಷಪ್ಪ ಹೇಳಿದಾಗ ಕೆಲವರು 'ಓಹ್! ಆ ಗುರ್ತು ಅದರದ್ದೇನು? ಹಾಕಿ ಕುದಿಸುತ್ತಿದ್ದುದು ಅವನಿಗೆ ನೆನಪಿದೆಯಂತೆ. ಆವಾಗಲೆಲ್ಲ ಚಹಾಪುಡಿ ಸಿಗುವುದು ಸಹ ದುಸ್ತರವಿತ್ತು. ಚಹಾ ಎಲೆ ಎನ್ನುವುದು ಸಿಗುತ್ತಿತ್ತು. ಬಹುತೇಕ ಹೊಲಗಳ ಬದುವಿನಲ್ಲಿ ಈರುಳ್ಳಿ ತಪ್ಪಲು ತರಹ ಬೆಳೆದದ್ದು ಸಿಗುತ್ತಿತ್ತು. ಅದನ್ನು ತಂದು ಕುದಿಯುವ ಬೆಲ್ಲದ ನೀರಿಗೆ ಹಾಕುವುದಿತ್ತು. ಆವಾಗ ಹಾಲು ಸಿಗುವುದು ಸಹ ಅಪರೂಪ. ಕರೇ ಚಹಾವನ್ನು ಕುಡಿಯುವುದು ತುಂಬ ಸಾಮಾನ್ಯ ಸಂಗತಿಯಾಗಿತ್ತು.

ಅಜ್ಜನ ವಂಶವಾಹಿಗಳು ಮೊಮ್ಮಗ ವಿರುಪಾಕ್ಷಪ್ಪನಲ್ಲಿಯೂ ಇರಬಹುದೆಂದು ಕೂಡಿದ ಮಂದಿ ಹೇಳಿದರು. ಅವನ ಬಗ್ಗೆ ಹೆಮ್ಮೆಪಟ್ಟರು. ಮನೆಯಲ್ಲಿ ಚಹಾ ಮಾಡುವುದು ತಾನೇನೆ ಎಂದು ಕೂಡ ಆತ ಹೇಳಿದ. ಹಿಂದೆ ಎಷ್ಟೋ ಸಲ ಮನೆಯಲ್ಲಿ ಹೆಂಡತಿಗೆ ಸಹಾಯ ಮಾಡುತ್ತೀಯೇನೆಂದು ಕೇಳಿದಾಗ ಈತ 'ಹೆಂಗಸರ ಕೆಲಸವನ್ನು ತಾನೇಕೆ ಮಾಡಲಿ?' ಎಂದು ಗಂಡಿನ ಅಹಂಕಾರವನ್ನು ಮೆರೆದಿದ್ದ. ಈಗ ಬದಲಾದ ಸನ್ನಿವೇಶದಲ್ಲಿ ಹೆಣ್ಣುಗಂಡು ಸಮಾನರು ಎಂದು ಆತ ಹೇಳುತ್ತಿದ್ದಾನೆ. ಅಲ್ಲದೆ ದೇವಪ್ಪ ಅನಸೂಯೆಯ ಉದಾಹರಣೆಯನ್ನು ಒಂದು ಸಲ ಆತ ಕೊಟ್ಟ. ದುಂಡಪ್ಪಕಾಕಾನಿಗೆ ಅನಿಸಿತು. ಓಹ್! ಊರು ತಾನು ಅಂದುಕೊಂಡಿದ್ದಕ್ಕಿಂತಲೂ ಮುಂದುವರೆದಿದೆ. ತಾನು ತಿಳಿದಂತೆ ಜನರ ನೋಟವೆಂಬುದು ಬಾವಿಯಲ್ಲಿನ ಕಪ್ಪೆಯ ರೀತಿಯಲ್ಲಿ ಇಲ್ಲವೆಂದು ಖುಷಿಯಾಯಿತು. ಜನರಲ್ಲಿ ಒಂದು ರಾಜಕೀಯ ತಿಳಿವಳಿಕೆ ಬರುತ್ತಿರುವುದು ಒಳ್ಳೆಯ ಬೆಳವಣಿಗೆಯೇ ಆಗಿದೆ. ತಾನು ಹೊಟೇಲು ಆರಂಭಿಸಬೇಕೆನ್ನುವ ಸಲಹೆ ಕೊಟ್ಟಾಗ ಅದಕ್ಕೆ ವಿರೋಧ ಬರಬಹುದೆಂದು ತಾನು ತಿಳಿದಿದ್ದೆ.

ಸುಲಿಗೆ ಎಂದರೇನು? ಪ್ರಾಮಾಣಿಕತೆ ಎಂದರೇನು? ಯಾವುದು ಒಳ್ಳೆಯದು? ಯಾವುದು ಕೆಟ್ಟದು? ಎಂಬುದೆಲ್ಲ ಮಂದಿಗೆ ಗೊತ್ತಾದರೆ ಸಾಕು. ಅವರು ತಮ್ಮ ಹಾದಿಯನ್ನು ತಾವೆ ಕಂಡುಕೊಳ್ಳುತ್ತಾರೆ. ವಿರುಪಾಕ್ಷಪ್ಪನಿಗೆ ಹೊಟೇಲ್ ನಡೆಸುವುದರ ಬಗ್ಗೆ ಒಂದು ಅಂದಾಜು ಇರುವಂತೆ ತೋರಿತು. ಆತ ಎಲ್ಲರ ಸಹಕಾರ ಕೋರಿದ. ಅದಕ್ಕೆ ಕೂಡಿದ ಮಂದಿ ಜೈಕಾರ ಹಾಕಿದರು. 'ನಾವೆಲ್ಲ ನಿನ್ನ ಜೋಡಿ ಅದೇವಿ. ಆ ಹೊಟೇಲು ನಿನ್ನದಲ್ಲ. ನಮ್ಮದು. ಹೊಡಿ ಚಕ್ಕಡಿ, ಬಿಡಬ್ಯಾಡ. ಮುಂದೆ ಇಟ್ಟಂತಹ ಹೆಜ್ಜೀನ ಹಿಂದೆ ಇಡಬ್ಯಾಡ.'

ಎಲ್ಲರೂ ಅವನಲ್ಲಿ ಅದೆಷ್ಟು ವಿಶ್ವಾಸ

## ಕಳೆದ ಸಂಚಿಕೆಯಲ್ಲಿ



ಕಂಡಕ್ಟರ್ ಸುಭಾಸನ ಕೊಲೆಯಾಗುತ್ತದೆ. ಇದನ್ನು ಅನಸವ್ವಳೇ ಮಾಡಿದ್ದು, ಈಕೆಯನ್ನು ಅರೆಸ್ಟ್ ಮಾಡಬೇಕು ಎಂದು ಹೊಸೂರಿನ ಮಂದಿ ಪೊಲೀಸ್ ಸ್ಟೇಷನ್‌ಗೆ ಮುತ್ತಿಗೆ ಹಾಕುತ್ತಾರೆ. ಪೋಲಿಸರು ಅನಸವ್ವಳನ್ನು ಬಂಧಿಸುತ್ತಾರೆ, ಆಕೆಯ ಕುಟುಂಬಸ್ಥರನ್ನು ವಿಚಾರಣೆ ನಡೆಸುತ್ತಾರೆ. ಊರ ಮಂದಿ ಸುಭಾಸನ ಶವಸಂಸ್ಕಾರ ಕಡೆ ನಡೆಯುತ್ತಾರೆ. ಕೊಲೆಯನ್ನು ಮೊದಲೇ ಯೋಜಿಸಲಾಗಿದ್ದರೆ ಇದನ್ನು ಯೋಜಿಸಿದವರು ಯಾರು? ಇದರ ಹಿಂದಿನ ಸೂತ್ರಧಾರರು ಯಾರು? ಅದನ್ನು ನಿರ್ವಹಿಸಿದವರು ಯಾರು? ಅನುಸೂಯ ತನಗೆ ಇದರ ಬಗ್ಗೆ ಗೊತ್ತೇ ಇಲ್ಲವೆಂದು ಹೇಳುತ್ತ ಸ್ಟೇಷನ್‌ನಲ್ಲಿಯೇ ಎರಡು ಸಲ ಪ್ರಜ್ಞೆ ತಪ್ಪಿ ಬೀಳುತ್ತಾಳೆ. ಸಮಸ್ಯೆ ಕಗ್ಗಂಟಾಗಿ ಪರಿಣಮಿಸುತ್ತದೆ.

ತುಂಬಿದರು. ವಿರುಪಾಕ್ಷಪ್ಪ ಹೊಟೇಲನ್ನು ಪೂಜೆ ಮಾಡಿ ಸುರು ಮಾಡಿದ. ಅದೂ ದೇವಪ್ಪನ ಚಾದಂಗಡಿಯ ಎದುರೆ. ದುಂಡಪ್ಪ ಹೇಳಿ ಆ ಮನೆಯನ್ನು ತಿಂಗಳು ಇಪ್ಪತ್ತು ರೂಪಾಯಿ ಬಾಡಿಗೆ ಮೇಲೆ ಕೊಡಿಸಿದ್ದ. ಹೊರಗಿನಿಂದ ಬಂದು ಹೋಗುವವರಿಗೆ ಅದು ಅನುಕೂಲಕರ ಜಾಗವಾಗಿತ್ತು. ಒಂದೆರಡು ದಿನ ಎಲ್ಲರೂ ಹೊಗಳಿದರು. ಆ ಸಂಭ್ರಮ ಅಷ್ಟಕ್ಕೆ ಮುಗಿಯಿತು. ವಿರುಪಾಕ್ಷಪ್ಪನ ಚಾದಂಗಡಿ ಹೆಚ್ಚೆಂದರೆ ಒಂದು ವಾರ ನಡೆಯಿತೆಂದು ಕಾಣುತ್ತದೆ. ಎಲ್ಲವನ್ನೂ ನಿರ್ವಹಿಸುವ ಹೊತ್ತಿಗೆ ಅವನಿಗೆ ಸಾಕು ಸಾಕಾಯಿತು.

'ಕಾಕಾ, ಇದು ಸುಮ್ಮನಿರಲಾರದೆ ಮೈಮ್ಯಾಲ ಇರುವಿ ಬಿಟ್ಟುಕೊಂಡಂಗ ಆತು. ಯಪ್ಪಾ! ಎಲ್ಲಾರನ್ನು ಹಿಡಿಯೋದಂದ್ರ ಒಲ್ಲೆಯೋ ಮಾರಾಯ. ಯಾರಿಗೆ ಬೇಕಾಗಿತ್ತು ಈ ಶಿಕ್ಷೆ. ತಿಂಗಳಾ ಸಾವಿರ ರೂಪಾಯಿ ಪುಕ್ಕಟೆ ಕೊಡ್ತೀನೆಂದ್ರೂ ಇಂತಹ ಉದ್ಯೋಗ ಮಾಡಬಾರದು. ಈ ದಂಧೆ ಮಾಡಾಕ ಮನಸ್ಸಾ ಬಾಳ ಗಟ್ಟಿ ಇರಬೇಕು.' ಎಲ್ಲರೂ ಅಲ್ಲಿಯ ತಿಂಡಿತಿನಿಸು, ಚಹಾ, ಕಾಫಿಗಳನ್ನು ದೇವಪ್ಪನ ಹೊಟೇಲಿನೊಂದಿಗೆ ಹೋಲಿಸಿ ನೋಡಿ ಏನಾದರೊಂದು ಶರಾ ಬರೆಯುವರು.

'ಏಯ್ ವಿರುಪಣ್ಣ, ಚಾ ಯಾರು ಮಾಡ್ತಾರೊ? ಸಪ್ಪಂದ್ರ ಸಪ್ಪ್. ಬಾಯೊಳಗ ಅವಲಕ್ಕಿ ಸ್ವಲ್ಪನೂ ಟೇಸ್ಟ್ ಇಲ್ಲ. ನಿನ್ನ ಹೊಟೇಲು ಇನ್ನೂ ಬಾಳ ಸುಧಾರಿಸಬೇಕೊ ಮಾರಾಯ. ಅಲ್ಲಪಾ, ದ್ಯಾವಣ್ಣ ಉದ್ರಿ ನಿಂದರಸಿದ್ದ. ನೀ ಎಲ್ಲಾ ರೊಕ್ಕ ಅಂತೀ. ನಮ್ಮ ಮನಿಯೊಳಗೇನು ರೊಕ್ಕದ ಗಿಡಾ ಇರ್ತಾವೇನು, ಈಗಿಂದೀಗ ತಂದುಕೊಡಾಕ.'



ಓಹ್! ಉಪದೇಶ ಮಾಡುವಲ್ಲಿ ಮಂದಿ ಯಾವಾಲಗೂ ಮುಂದು. ನಿಂತು ಮಾಡಿದರೆ, ನಿರ್ವಹಿಸಿದರೆ, ತೊಂದರೆ ಅನುಭವಿಸಿದರೆ ಗೊತ್ತಾಗುತ್ತದೆ. ಏನಾದರೊಂದು ಹೇಳಲು, ಅಲ್ಲಸಲ್ಲದ್ದು ಮಾತಾಡಲು ಎಲ್ಲರಿಗೂ ಬರುತ್ತದೆ! ಅಂತೂ ವಿರುಪಾಕ್ಷಪ್ಪನ ಹೊಟೇಲು ಹೇಳಹೆಸರಿಲ್ಲದೆ ಹೋಯಿತು. ಅದು ಮುಚ್ಚಿಹೋದ ಮೇಲೆ ಜನ ತಮಗೆ ತಿಳಿದಂತಹ ಕಾರಣ ಕೊಡತೊಡಗಿದರು.

'ಕಂಡಕ್ಟರ್‌ನ ದೆವ್ವ ಅಲ್ಲಿ ಎದುರಿಗೇನೆ ಕುಂತಿರತಿತ್ತು. ಒಂದೊಂದು ಸಲ ಅದು ಇಂವನ ರೊಕ್ಕದ ಗಲ್ಲೇದ ಮ್ಯಾಲ ಕುಂದ್ರೊದಂತ. ಅದಕ್ಕಂತನ ವಿರುಪಣ್ಣ ಚಾದಂಗಡಿ ಬಂದ್ ಮಾಡಿಕೊಂಡು ಹ್ವಾದ. ಪಾಪ, ಬಾಳ ಲುಕ್ಸಾನ್ ಆತು. ಈ ಕಂಡಕ್ಟರ್ ಇದ್ದಾಗಲೂ ಕಾಡಿದ. ಸತ್ತ ಮ್ಯಾಲೂ ಕಾಡಲಿಕ್ಕೆ ಹತ್ಯಾನ.' ದೇವಣ್ಣ ಪರವೂರಿನವನು, ಅನಸವ್ವ ಪರವೂರಿನವಳು, ಸುಭಾಸ ಪರವೂರಿನವನು ಎಂದು ಹೇಳುತ್ತಿದ್ದೆವು, ಆದರೆ ಅವರೀಗ ತಮ್ಮವರೆ ಅನಿಸುತ್ತಿದ್ದಾರಲ್ಲ! ದುಂಡಪ್ಪಕಾಕಾನ ಜೊತೆ ಒಂದಿಬ್ಬರು ಮಾತುಕತೆ ನಡೆಸಿದ್ದರು. ಕಾಕಾನೂ ಇತ್ತೀಚೆಗೆ ಮನಸ್ಸಿನಲ್ಲಿ ಅಂದುಕೊಳ್ಳುತ್ತಿದ್ದ. ದೇವಪ್ಪನನ್ನು ಮತ್ತೆ ಕರೆ ತಂದು ಮತ್ತೆ ಹೊಟೇಲ್ ಸುರು ಮಾಡಿಸಿದರೆ ಹೇಗೆ? ಅವನು ಬರದಿದ್ದರೂ ಬೇರೆಯವರನ್ನು ನೇಮಿಸಿದರೆ ಹೇಗೆ? ಹೊಟೇಲ್ ಅಂಗಳದಲ್ಲಿ ಕಂಡಕ್ಟರ್ ಸತ್ತನೆಂದು ಅದನ್ನು ಮುಚ್ಚಿದರು. ಆಯಿತು, ಒಂದು ದಿನ ಮುಚ್ಚಿತೆನ್ನಿ, ಎರಡು ದಿನ ಮುಚ್ಚಿತೆನ್ನಿ. ಅನಂತ ಕಾಲ ಮುಚ್ಚಲಾದೀತೆ? ಯಾರಾದರೂ ಸತ್ತರೆಂದು ಮನೆಗಳನ್ನು ಮುಚ್ಚುತ್ತ ಹೋದರೆ ಹೇಗೆ? ಎಲ್ಲ ಊರುಗಳಲ್ಲಿ, ಎಲ್ಲ ಮನೆಗಳಲ್ಲಿ ಸಾವುನೋವು ಸಂಭವಿಸುತ್ತಲೆ ಇರುತ್ತವೆ. ದೇವಣ್ಣನ ಚಾದಂಗಡಿಯಲ್ಲಿ ಏನೋ ಒಂದು ಭೀಕರ ಕೃತ್ಯ ನಡೆಯಿತೆಂದ ಮಾತ್ರಕ್ಕೆ ಆ ಜಾಗೆ ಮತ್ತು ಆ ಮನೆ ವಾಸಿಸಲು ಯೋಗ್ಯವಲ್ಲವೆ? ಹಾಗಿದ್ದರೆ ಎಲ್ಲ ಊರುಗಳ, ಎಲ್ಲ ಮನೆಗಳು ಸಹ ಯೋಗ್ಯವಲ್ಲ.

(ಸಶೇಷ)